CW : 22
PW : 10

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.475/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಸುನೀಲ್ ಕುಮಾರ್ ಎಂ. ಎಸ್. |
| ತಂದೆಯ ಹೆಸರು | : | ಶಂಕರಯ್ಯ |
| ಪ್ರಾಯ | : | 43 |
| ಉದ್ಯೋಗ | : | PI, ಮಹಿಳಾ ಠಾಣೆ, ಪುತ್ತೂರು |
| ವಾಸಸ್ಥಳ | : | ಪುತ್ತೂರು |
| ದಿನಾಂಕಃ 22.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನಾನು ನವೆಂಬರ್ 2021 ರಿಂದ ಫೆಬ್ರುವರಿ 2024 ರವರೆಗೆ ಪುತ್ತೂರು ನಗರ ಠಾಣೆಯಲ್ಲಿ PI ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.07.2023 ರಂದು ಚಾಸಾ–21 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ.

ಮೃತ ಚನ್ನಪ್ಪ ರವರ ಶವಪಂಚನಾಮೆಯನ್ನು ಮಾಡುವಂತೆ ಚಾಸಾ21 ರವರಿಗೆ ನಿರ್ದೇಶಿಸಿರುತ್ತೇನೆ. ಚಾಸಾ–1 ರಿಂದ 5 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ4 ಮತ್ತು 5 ರವರು ನಿಪಿ7 ಮತ್ತು 16 ರಂತೆ ಮರುಹೇಳಿಕೆ ನೀಡಿರುತ್ತಾರೆ.

CW : 22
PW : 10

ದಿಃ02.09.2023 ರಂದು PM ವರದಿಯನ್ನು ಸ್ವೀಕರಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ PM ವರದಿಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ9(ಎ)** ಎಂದು ಗುರುತಿಸಲಾಯಿತು. 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಮಾಡಿರುವುದಿಲ್ಲ.

**ಪಾಟಿಸವಾಲು ಆರೋಪಿಗಳ ಪರ ಶ್ರೀ M.N. ವಕೀಲರಿಂದಃ**

ದಿಃ07.07.2023 ರಂದು ಚಾಸಾ2 ರವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದು ಪುನಃ ಆಸ್ಪತ್ರೆಗೆ ದಾಖಲಾದಾಗ ನನಗೆ ಯಾವುದೇ ಸೂಚನಾ ಪತ್ರ ಬಂದಿರುವುದಿಲ್ಲ. ಮರಣ ಹೊಂದಿದ ಬಗ್ಗೆ ನನಗೆ ಸೂಚನಾ ಪತ್ರ ಬಂದ ನಂತರ ಗೊತ್ತಾಗಿರುತ್ತದೆ. ಸದರಿ ಸೂಚನಾ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಚಾಸಾ1 ರವರ ಮರುಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತೇವೆ. ಚಾಸಾ1 ರಿಂದ 4 ರವರು ಮರುಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಅಪಘಾತದಿಂದಾದ ಗಾಯದಿಂದ ಚನ್ನಪ್ಪರವರು ತೀರಿಹೋಗಿಲ್ಲ ಎಂದರೆ ಸರಿಯಲ್ಲ. ವಾಯುಮಾಲಿನ್ಯ ಪ್ರಮಾಣಪತ್ರ ಇತ್ತು ಎಂದರೆ ಸರಿಯಲ್ಲ. ಸರಿಯಾಗಿ ತನಿಖೆ ನಡೆಸದೇ ಸುಳ್ಳು ದೋ. ಪ. ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚನ್ನಪ್ಪನವರ ಸಾವಿಗೂ ಆರೋಪಿ ಕಾರಣನಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು